# ಮಾಹಿತಿ ಹಕ್ಕು ಕಾಯಿದೆ.

**1. ಕಾಯಿದೆ :** ಏಪ್ರಿಲ್ 2008

ಈ ಕಾಯಿದೆ 2005 ರಲ್ಲಿ ಜಾರಿಗೆ ಬಂದಿದ್ದು ಯಾವುದೇ ವ್ಯಕ್ತಿಯು ಕೆಳಗೆ ಕಾಣಿಸಿದ ಸಂಸ್ಥೆಗಳಿಂದ ಯಾವುದೇ ರೀತಿಯ ಮಾಹಿತಿಗಳನ್ನು ಪಡೆಯಬಹುದು(ಕಾನೂನಿನಂತೆ 30 ದಿನಗಳ ಒಳಗೆ ಸಂಬಂಧಿಸಿದ ಅಧಿಕಾರಿಯು ಮಾಹಿತಿ ಒದಗಿಸಬೇಕು) ಇಲ್ಲಿ ನೀಡಿರುವ ಪರಿಚಯ ಏಪ್ರಿಲ್ 2008 ರಲ್ಲಿ ಜಾರಿಯಲ್ಲಿದ್ದ ಕಾನೂನಿನಂತಿದ್ದು ಇತ್ತೀಚಿನ ನಿಯಮಗಳಿಗೆ ಸಂಬಂಧಿಸಿದ ವೆಬ್ ಸೈಟ್ ನೋಡಿರಿ.

1. ಕೇಂದ್ರ/ರಾಜ್ಯ ಸರಕಾರಗಳ ವಿವಿಧ ಇಲಾಖೆಗಳು.
2. ಕೇಂದ್ರ/ರಾಜ್ಯ ಸರಕಾರಗಳಿಂದ ಅನುದಾನ ಪಡೆಯುವ ಸಂಸ್ಥೆಗಳು( ಉದಾ IIM, IIT, ವಿಶ್ವ ವಿದ್ಯಾಲಯಗಳು... )
3. ಕೇಂದ್ರ/ರಾಜ್ಯ ಸರಕಾರಗಳ ಸ್ವಾಧೀನ ದಲ್ಲಿ ನಡೆಸಲ್ಪಡುವ ಸಂಸ್ಥೆಗಳು( ಉದಾ BEML,BSNL,ONGC, ರೇಷ್ಮೆ ಕಾರ್ಖಾನೆ ಮೈಸೂರು, ಗಂಧದ ಕಾರ್ಖಾನೆ ಮೈಸೂರು, ಸಕ್ಕರೆ ಕಾರ್ಖಾನೆ ಮಂಡ್ಯ ..)
4. ಸರ್ಕಾರದ ಹಿಡಿತದಲ್ಲಿದ್ದು ಸಾರ್ವಜನಿಕ ಹಿತಕ್ಕಾಗಿರುವ ಸೇವಾ ನಿರತ ಸಂಸ್ಥೆಗಳು( ಗ್ರಾಮ/ನಗರ/ಜಿಲ್ಲಾ ಪಂಚಾಯತ್, ಜಿಲ್ಲಾ ಪರಿಷತ್,ನಗರ ಸಭೆ, ನಗರ ಪಾಲಿಕೆ, ವಿದ್ಯುಚ್ಛಕ್ತಿ ಮಂಡಳಿಗಳು..)

- ಮಾಹಿತಿಯು, ಯಾವುದೇ ದಾಖಲೆ, ಪತ್ರ, ಇ ಮೈಲ್, ಅಭಿಪ್ರಾಯ, ಉಪದೇಶ, ಪತ್ರಿಕಾ ಪ್ರಕಟಣೆ, ಸುತ್ತೋಲೆ, ಆದೇಶ, ವರದಿ, ಮಾದರಿ ಇತ್ಯಾದಿ ಆಗಿರಬಹುದು ಮತು ಯಾವುದೇ ರೀತಿಯಲ್ಲೂ ಇರಬಹುದು.
- ದಾಖಲೆ ಮತ್ತು ಕಾಗದದ ಪತ್ರಗಳನ್ನು ಕಾಗದ/ ಆಡಿಯೋ/ವೀಡಿಯೋ, ಕ್ಯಾಸೆಟ್ ರೂಪದಲ್ಲಾಗಲೀ ಅಥವಾ ಇನ್ನಿತರ ರೂಪದಲ್ಲಾಗಲಿ ಕೇಳಬಹುದು ಇಲ್ಲವೆ ಖುದ್ದಾಗಿ ಕಛೇರಿಯಲ್ಲಿ ಅವುಗಳನ್ನು ಪರಿಶೀಲಿಸಬಹುದು/ಬರೆದು ಕೊಳ್ಳಬಹುದು.
- ಕೇಳಿರುವ ಮಾಹಿತಿ ರಾಷ್ಟ್ರೀಯ ಭದ್ರತೆಗೆ ಧಕ್ಕೆ ಬರುವಂತಿದ್ದರೆ, ವಾಣಿಜ್ಯ/ವೈಜ್ಞಾನಿಕ ಗೋಪ್ಯತೆಗೆ ಭಂಗ ಬರುವಂತಿದ್ದರೆ ಅಥವಾ ನ್ಯಾಯಾಲಯಗಳನ್ನು ಮಾಹಿತಿ ನೀಡಬಾರದು ಎಂದು ಆದೇಶಿಸಿದ್ದರೆ ಮತ್ತು ಇನ್ನಿತರ ಸೂಕ್ಷ್ಮಕಾರಣವಿದ್ದಲ್ಲಿ ಮಾತ್ರ ಸಂಬಂಧಿಸಿದ ಸಂಸ್ಥೆಗಳು ಮಾಹಿತಿ ನೀಡುವುದನ್ನು ನಿರಾಕರಿಸಬಹುದು. ಅಂತಹ ಸಂದರ್ಭಗಳಲ್ಲಿ ಕಾರಣಗಳನ್ನು ನೀಡಲೇ ಬೇಕು.
- **ಮಾಹಿತಿ ಏಕೆ ಬೇಕು ಎಂದು ಅರ್ಜಿಯಲ್ಲಿ ನಮೂದಿಸಬೇಕಾಗಿಲ್ಲ ಹಾಗೂ ಅಧಿಕಾರಿಯೂ ಮಾಹಿತಿ ಏಕೆ ಬೇಕು ಎಂದು ಕೇಳುವಂತಿಲ್ಲ**

**2. ಮಾಹಿತಿ ಹಕ್ಕಿನಡಿ ವಿವಿಧ ಹಂತಗಳಲ್ಲಿ ಮೇಲ್ಮನವಿ ಸಲ್ಲಿಸಲು ಇರುವ ಅವಕಾಶಗಳನ್ನು ಕೆಳಗಿನಂತೆ ನಿರೂಪಿಸಬಹುದು.**



**3. ಮಾಹಿತಿ ಪಡೆಯುವ ವಿವಿಧ ಹಂತಗಳು:**

1. 10 ರೂ ಶುಲ್ಕವನ್ನು ನಗದು/ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿ ಮಾಡಿ ವಿವರಗಳನ್ನು ನಿಗದಿತ ಅರ್ಜಿ ನಮೂನೆಯಲ್ಲಿ(ಪುಟ 4 ನ್ನು ನೋಡಿ)ತುಂಬಿ ಸಂಬಂಧಿಸಿದ ಅಧಿಕಾರಿಗೆ ನೀಡಬೇಕು,
2. ಸಾಮಾನ್ಯವಾಗಿ 30 ದಿನಗಳ ಒಳಗೆ ವಿವರಗಳನ್ನು ಸಂಬಂಧಿಸಿದ ಅಧಿಕಾರಿ ನೀಡಬೇಕು ಅಥವಾ ವಿಷಯ ಬೇರೆ ಇಲಾಖೆಗೆ ಸಂಬಂಧ ಪಟ್ಟಿದ್ದರೆ ಅವುಗಳನ್ನು ಎಲ್ಲಿಂದ ಪಡೆಯಬಹುದು ಎಂದು 5 ದಿನಗಳ ಒಳಗೆ ತಿಳಸಬೇಕು. ಮಾಹಿತಿ ಒಬ್ಬ ವ್ಯಕ್ತಿಯ ಜೀವನ್ಮರಣದ ವಿಷಯಕ್ಕೆ ಸಂಬಂಧಿಸಿದ್ದರೆ 48 ಗಂಟೆಯ ಒಳಗೆ ಮಾಹಿತಿ ಒದಗಿಸಬೇಕು. ನಿರ್ದಿಷ್ಟ ಅವಧಿಯೊಳಗೆ ಮಾಹಿತಿ ನೀಡದಿದ್ದಲ್ಲಿ ಮಾಹಿತಿಯನ್ನು ನಿರಾಕರಿಸಲಾಗಿದೆ ಎಂದು ಪರಿಗಣಿಸಿ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬಹುದು.
3. ಒದಗಿಸಬೇಕಾದ ಪ್ರತೀ ಪುಟಕ್ಕೆ ನಿಗದಿ ಪಡಿಸಿದ ದರದಲ್ಲಿ ಪುಟಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಹಣವನ್ನು, ವಿವರಗಳನ್ನು ನೀಡಿ ಕಟ್ಟುವಂತೆ ತಿಳಿಸಬಹುದು.
4. ಅರ್ಜಿಯನ್ನು ಸ್ವೀಕರಿಸದಿದ್ದರೆ, ನಿಗದಿತ ಅವಧಿಯಲ್ಲಿ ವಿವರಗಳನ್ನು ನೀಡದಿದ್ದರೆ ಅಥವಾ ಅಸಮರ್ಪಕ/ತಪ್ಪು ಮಾಹಿತಿ ನೀಡಿದ್ದರೆ ಮೇಲಧಿಕಾರಿಗೆ ದೂರು ನೀಡಬಹುದು.
5. ಮೇಲ್ಮನವಿ ಯಾಗಿ ರಾಜ್ಯ ಮಾಹಿತಿ ಕಮಿಷನರ್ ಗೆ ದೂರು ಕೊಡಬಹುದು( ಮಾಹಿತಿ ಕೊಡದಿದ್ದ/ತಪ್ಪು ಮಾಹಿತಿ ಕೊಟ್ಟ ಅಧಿಕಾರಿಯ ಮೇಲೆ ಇವರು ದಿನಕ್ಕೆ 250 ರೂ ಗಳಂತೆ ದಂಡ ವಿಧಿಸಬಹುದು ಹಾಗೂ ಶಿಸ್ತಿನ ಕ್ರಮ ಕೈಗೊಳ್ಳಬಹುದು)

**4. ಮಾಹಿತಿ ಕೇಳಬಹುದಾದ ಕೆಲವು ಉದಾಹರಣೆಗಳು:**

| ಸಂ | ಕೇಳ ಬಹುದಾದ ವಿವರ | ದೊರೆತ ಮಾಹಿತಿಯ ಉಪಯೋಗ |
|---|---|---|
| 1 | ಚುನಾಯಿತ ವ್ಯಕ್ತಿಗೆ ನೀಡಿದ ಸಂಬಳ, ಭತ್ಯೆಗಳು, ವ್ಯಕ್ತಿಯು ಘೋಷಿಸಿದ ಆಸ್ತಿ ಪಾಸ್ತಿಯ ವಿವರ. | ವ್ಯಕ್ತಿಯು ಅಧಿಕೃತ ಮೂಲಗಳಿಂದ ಹೊರತು ಪಡಿಸಿ ಅಧಿಕ ಆಸ್ತಿ ಪಾಸ್ತಿ ಹೊಂದಿದ್ದರೆ ಸಂಬಂಧಿಸಿದವರಿಗೆ/ಮೇಲಧಿಕಾರಿಗಳಿಗೆ/ಲೋಕಾಯುಕ್ತರಿಗೆ ದೂರು. |
| 2 | ಯಾವುದೇ ಸರಕಾರೀ ಉದ್ಯೋಗಿಯ ಸಂಬಳ, ಭತ್ಯೆಗಳ ವಿವರ. | |
| 3 | ಚುನಾಯಿತ ವ್ಯಕ್ತಿಯು ಸಂಬಂಧಿಸಿದ ಸಭೆಯಲ್ಲಿ(ವಿಧಾನ /ಲೋಕ) ಹಾಜರಾಗಿದ್ದ ದಿನಗಳು, ಆ ವ್ಯಕ್ತಿಯು ಕೇಳಿದ ಪ್ರಶ್ನೆಗಳ ವಿವರ. | ಸದನಗಳ ಕಾರ್ಯಕಲಾಪಗಳಲ್ಲಿ ವ್ಯಕ್ತಿಯ ಸಕ್ರಿಯತೆಯ ಬಗ್ಗೆ ತಿಳಿಯಬಹುದು. |
| 4 | ಹಳ್ಳಿಯ/ನಗರದ ಸಂಸ್ಥೆಗಳು ಸಾರ್ವಜನಿಕರಿಗಾಗಿ ಕೈಕೊಂಡ ಕಾರ್ಯಕ್ರಮಗಳ/ಕಾಮಗಾರಿಗಳ ಆಮೂಲಾಗ್ರ ವಿವರ:<br>ರಸ್ತೆ ದುರಸ್ತಿಗೆ, ಶಾಲಾ ಕಟ್ಟಡ ಕಟ್ಟಲಿಕ್ಕೆ, ಸೇತುವೆ ನಿರ್ಮಾಣಕ್ಕೆ ಮಂಜೂರಾದ ಹಣ, ನಿಗದಿ ಪಡಿಸಿದ ಕಾಮಗಾರಿಯ ಗುಣ ಮಟ್ಟ , ಗುತ್ತಿಗೆದಾರರನ್ನು ಆಯ್ಕೆ ಮಾಡಿದ ಕ್ರಮ, ಗುತ್ತಿಗೆ ದಾರನಿಗೆ ಪಾವತಿ ಮಾಡಿದ ಹಣದ ವಿವರ . . . | ಏನಾದರೂ ಅಕ್ರಮ ನಡೆದಿದ್ದರೆ/ಸ್ವಜನ ಪಕ್ಷಪಾತ ನಡೆದಿದ್ದರೆ/ಕಳಪೆ ಕಾಮಗಾರಿಯಾಗಿದ್ದರೆ ಜನಾಂದೋಳನ ನಡೆಸಬಹುದು ಅಥವಾ ಮೇಲಧಿಕಾರಿಗಳಿಗೆ ದೂರು ನೀಡಬಹುದು. |
| 5 | ವಿಶ್ವ ವಿದ್ಯಾನಿಲಯದಿಂದ ಉತ್ತರ ಪತ್ರಿಕೆಗಳ ಪ್ರತಿ (ಬೇರೆಯವರದ್ದೂ ಕೂಡ). | ಸ್ವಜನ ಪಕ್ಷಪಾತ ನಡೆದಿದ್ದರೆ ಅದರ ತಿದ್ದುಪಡಿ ಮತ್ತು ಸಂಬಂಧಿಸಿದ ಅಧ್ಯಾಪಕರ ಮೇಲೆ ಕ್ರಮ. |
| 6 | ಅಭ್ಯರ್ಥಿಗಳನ್ನು ಕೆಲಸಕ್ಕೆ ಆಯ್ಕೆಗಾಗಿ ನಿಗದಿ ಪಡಿಸಿದ ಮಾನದಂಡ, ಆಯ್ಕೆ ಮಾಡಿದ ವಿಧಾನ ಮತ್ತು ಅವರು ಗಳಿಸಿದ ಅಂಕಗಳು. | ಸ್ವಜನ ಪಕ್ಷಪಾತ ನಡೆದಿದ್ದರೆ ಅದರ ತಿದ್ದುಪಡಿ ಮತ್ತು ಸಂಬಂಧಿಸಿದ ಆಯ್ಕೆ ಸಮಿತಿಯ ಮೇಲೆ ಕ್ರಮ. |
| 7 | ಬೇರೆಯವರು ಪಾವತಿಸಿದ ಕಂದಾಯದ ವಿವರ( ಮನೆ, ಆಸ್ತಿ ) | ಅನ್ಯಾಯವಾಗಿದ್ದಲ್ಲಿ ಅದರ ಸರಿಪಡಿಸುವಿಕೆ. |
| 8 | ಯಾವುದೇ ಕಟ್ಟಡವನ್ನು ಕಟ್ಟಲು ಪಂಚಾಯಿತಿ/ಪಾಲಿಕೆ/ಅಭಿವೃದ್ಧಿ ಪ್ರಾಧಿಕಾರ ಮಂಜೂರು ಮಾಡಿದ ನಕ್ಷೆ ಮತ್ತಿತರ ವಿವರಗಳು. | ಮಂಜೂರಾದ ನಕ್ಷೆ ನಿಯಮಗಳಿಗೆ ವಿರುದ್ಧವಾಗಿದ್ದರೆ, ಅಥವಾ ಕಟ್ಟುತ್ತಿರುವ ಕಟ್ಟಡ ನಕ್ಷೆಯಂತಿರದಿದ್ದರೆ, ನ್ಯಾಯಾಲಯಕ್ಕೆ ಮೊರೆ ಹೋಗದೆ ಕಟ್ಟಡ ಕಟ್ಟದಿರುವಂತೆ ತಡೆಯಾಜ್ಞೆ ತರಬಹುದು. |
| 8 | ಸರಕಾರದ ವಿವಿಧ ಯೋಜನೆಯಡಿ ಕಾಮಗಾರಿಗಳಿಗೆ/ಜನಹಿತ ಯೋಜನೆಗಳಿಗೆ ಒದಗಿಸಿದ ಹಣ, ಫಲಾನುಭವಿಗಳ ವಿವರ, ಖರ್ಚು ಮಾಡಿದ ಹಣದ ವಿವರ. | ಅನ್ಯಾಯವಾಗಿದ್ದಲ್ಲಿ ಅದರ ಸರಿಪಡಿಸುವಿಕೆ. |
| 9 | ವಸತಿಗಾಗಿ ನಿಗದಿಪಡಿಸಿರುವ ಸ್ಥಳಗಳಲ್ಲಿ ವಸತಿಯೇತರ ಕಟ್ಟಡದ ನಿರ್ಮಾಣ. | ‘ನಿವೇಶನದ ಉಪಯೋಗತ್ವ ದ ಬದಲಾವಣೆ ಇಲ್ಲದೇ ವಾಣಿಜ್ಯ ಕಟ್ಟಡ ಕಟ್ಟಿದ್ದರೆ ನಿರ್ಮಾಣಕ್ಕೆ ತಡೆ |

**5. ಮಾಹಿತಿ ಹಕ್ಕಿನ ಕಾಯಿದೆಯಿಂದಾಗಿ ಉಪಯೋಗವಾದ ಕೆಲವು ಪ್ರಮುಖ ಘಟನೆಗಳು ಮತ್ತು ಅವುಗಳ ಪರಿಣಾಮ**

1. ಉನ್ನತ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರ ಜನರಿಂದ ಅರ್ಜಿಗಳನ್ನು ಸ್ವೀಕರಿಸುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸಂಸ್ಥೆಗಳು, ಕೆಲವೇ ಸೀಮಿತ ಸೀಟ್ ಗಳಿಗೆ ಅಭ್ಯರ್ಥಿಗಳ ಆಯ್ಕೆಯ ಕ್ರಮವನ್ನು ಬಹಳ ಗೋಪ್ಯತೆಯಿಂದ ಕಾದು ಕೊಂಡು ಬಂದಿದ್ದುದರಿಂದ ಅಭ್ಯರ್ಥಿಗಳಿಗೆ ಆಯ್ಕೆಯ ಕ್ರಮದ ಪಾರದರ್ಶಕತೆಯ ಬಗ್ಗೆ ಸಂಶಯ ವಿತ್ತು. 2005 ರಲ್ಲಿ ಬೆಂಗಳೂರಿನ ಒಬ್ಬ ವಿದ್ಯಾರ್ಥಿನಿಯು ತನ್ನನ್ನು ಆಯ್ಕೆ ಮಾಡದಿದ್ದರ ಬಗ್ಗೆ ಪ್ರಶ್ನಿಸಿ ಈ ಕಾಯಿದೆ ಅಡಿ ಆಯ್ಕೆಗಾಗಿ ಅನುಸರಿಸುವ ಮಾನದಂಡ ಮತ್ತಿತರ ವಿಷಯಗಳನ್ನು ಬಹಿರಂಗ ಪಡಿಸಬೇಕೆಂದು ಕೇಳಿದಾಗ ಮೊದಲು ಸಂಸ್ಥೆಯು ತಿರಸ್ಕರಿಸಿದರೂ ಅಂತಿಮವಾಗಿ ಕೇಂದ್ರ ಮಾಹಿತಿ ಕಮಿಶನರ್ ಆದೇಶದಂತೆ, ಆಯ್ಕೆಗೆ ಅನುಸರಿಸುವ ಎಲ್ಲಾ ಮಾನದಂಡಗಳ ವಿವರಗಳನ್ನು ನೀಡಬೇಕಾಯಿತು. ಇದರಿಂದಾಗಿ ಈಗ ಆಯ್ಕೆಯ ಕ್ರಮದಲ್ಲಿ ಪಾರದರ್ಶಕತೆಯೂ ಇದ್ದು ವಿದ್ಯಾರ್ಥಿಗಳು ಮೊದಲೇ ಪರೀಕ್ಷೆಗೆ ತಯಾರಾಗಬಹುದು.
2. ಈ ಬೆಳವಣಿಗೆಯನ್ನು ಅನುಸರಿಸಿ 2008 ರಿಂದ ಇಂಡಿಯನ್ ಇನ್ಸ್ಟಿಟ್ಯೂಟ್ ಟೆಕ್ನಾಲಜಿ ಸಂಸ್ಥೆಗಳು ಆಯ್ಕೆಗೆ ಅನುಸರಿಸುವ ವಿಧಾನಗಳನ್ನು ಬಹಿರಂಗ ಪಡಿಸಲು ಆರಂಭಿಸಿವೆ. ಇದರಿಂದ ಸಂಬಂಧಿಸಿದ ಪರೀಕ್ಷೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ.
3. ಬಹು ಮಹಡಿಯ ವಸತಿ ಕಟ್ಟಡ(ಫ್ಲಾಟ್) ಕಟ್ಟಬೇಕಾದರೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ(ಕಟ್ಟಡದ ಪಕ್ಕದ ರಸ್ತೆಗಳು ಸುಮಾರು ೧೬೦ ಅಡಿ ಅಗಲ ಇರಬೇಕು) ಆದರೆ ಬೆಂಗಳೂರಿನ ಜಯನಗರದ ಮೊದಲನೇ ಬ್ಲಾಕ್ ಒಂದರಲ್ಲಿ ಈ ನಿಯಮವನ್ನು ಸಡಲಿಸಲೋಸುಗ ೪೦ ಅಡಿ ಅಗಲದ ಅಕ್ಕಪಕ್ಕದ ಎರಡು ರಸ್ತೆಗಳನ್ನು ಒಂದಾಗಿ ನಮೂದಿಸಿ ಬೆಂಗಳೂರು ನಗರ ಪಾಲಿಕೆಯಿಂದ ಕಟ್ಟಡ ಕಟ್ಟಲು ಅನುಮತಿ ತೆಗೆದು ಕೊಳ್ಳಲಾಗಿತ್ತು. ಮಾಹಿತಿ ಹಕ್ಕಿನ ಕಾಯಿದೆಯ ಅಡಿಯಲ್ಲಿ ಅಲ್ಲಿನ ನಿವಾಸಿಗಳು ನಗರಪಾಲಿಕೆ ಮತ್ತಿತರ ಸಂಬಂಧಿಸಿದ ಇಲಾಖೆಗಳಿಂದ ಮಾಹಿತಿ ಪಡೆದು ಮೇಲಧಿಕಾರಿಗಳಿಗೆ ತಿಳಿಸಿ, ನ್ಯಾಯಾಲಯದ ಮೆಟ್ಟಲನ್ನು ಹತ್ತದೇ,ಕಟ್ಟಡವನ್ನು ಅರ್ಧಕ್ಕೇ ನಿಲ್ಲಿಸಿದ್ದಾರೆ.
4. ಬೆಂಗಳೂರು ನಗರ ಪಾಲಿಕೆಯ ತನ್ನ ಎಲ್ಲಾ ಉದ್ಯೋಗಿಗಳ ಸಂಬಳ ಮತ್ತು ಭತ್ಯದ ವಿವರಗಳನ್ನು ತನ್ನ ಅಂತರ್ಜಾಲ ತಾಣದಲ್ಲಿ ಒದಗಿಸಿದ್ದು ಯಾವುದೇ ನೌಕರ ತನ್ನ ಆದಾಯದ ಮೂಲಕ್ಕಿಂತ ಅಧಿಕ ಸಂಪತ್ತನ್ನು ಹೊಂದಿದ್ದರೆ ಲೋಕಾಯುಕ್ತರಿಗೆ ದೂರು ನೀಡಬಹುದು.

ಮೇಲೆ ತಿಳಿಸಿರುವುದು ಕೆಲವೇ ಉದಾಹರಣೆಗಳಾಗಿದ್ದು ಅಂತಹವು ಬಹಳ ಇವೆ. ಈ ಕಾಯಿದೆಯಿಂದ ಏನೆಲ್ಲ ಅನ್ಯಾಯ/ಅಕ್ರಮ ನಡೆಯುವುದನ್ನು ತಪ್ಪಿಸಬಹುದು ಎನ್ನುವುದು ವ್ಯಕ್ತಿಯ ಊಹೆಗೆ ಬಿಟ್ಟದ್ದು.

**ಎಲ್ಲವುದಕ್ಕೂ ಮುಖ್ಯವಾಗಿ ಕಾಯಿದೆ ಅಡಿ ಮಾಹಿತಿಗಳನ್ನು ಜನರು ಕೇಳುತ್ತಾರೆ ಎನ್ನುವ ಭೀತಿಯಿಂದ ಹೆಚ್ಚಿನ ಸರಕಾರೀ ಕಛೇರಿಗಳಲ್ಲಿ ನೌಕರರು ಪಕ್ಷಪಾತವಿಲ್ಲದೇ ದಕ್ಷತೆಯಿಂದ ಕೆಲಸಮಾಡಲು ಆರಂಭಿಸಿರುವುದನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಗಳ ಮೊರೆ ಹೋಗದೇ ಕಾನೂನು ಬಾಹಿರ ಕೆಲಸಗಳನ್ನು ನಿಲ್ಲಿಸಿ ಅಂತಹವು ಮುಂದೆ ಪುನರಾವರ್ತನೆ ಆಗದಂತೆ ನೋಡಿಕೊಳ್ಳಬಹುದು.**

ಇನ್ನೂ ಹೆಚ್ಚಿನ ವಿವರಗಳಿಗೆ ಮತ್ತು ಇತ್ತೀಚಿನ ನಿಯಮಗಳಿಗೆ ಕೆಳಗಿನ ಅಂತರ್ಜಾಲದ ಕೊಂಡಿಗಳನ್ನು ಇಲ್ಲಿಂದಲೇ ಕ್ಲಿಕ್ಕಿಸಿ.

1. http://www.kic.gov.in/karnataka_rules.html (ಕ್ಲಿಕ್ಕಿಸಿ)

2. http://www.righttoinformation.gov.in (ಕ್ಲಿಕ್ಕಿಸಿ)

**6. ಮಾಹಿತಿ ಪಡೆಯಲು ಸಲ್ಲಿಸಬೇಕಾದ ಅರ್ಜಿಯ ನಮೂನೆ:**

## ನಮೂನೆ ಎ (2005 : ಸೆಕ್ಷನ್ 6(1),7(1))

| | | |
|---|---|---|
| 1 | ಅರ್ಜಿದಾರನ ಹೆಸರು | |
| 2 | ಅರ್ಜಿದಾರನ ವಿಳಾಸ | |
| 3 | ಯಾವ ವಿವರಗಳು( ದಾಖಲೆ/ವಿಷಯ/ನಮೂನೆ) ಬೇಕಾಗಿವೆ<br>(ಪ್ರತಿಗಳು ಬೇಡವಾದಲ್ಲಿ ಯಾವ ಕಡತ ಗಳನ್ನು ನೋಡಬೇಕೆಂದೂ ತಿಳಿಸಬಹುದು) | |
| 4 | ಮಾಹಿತಿ ನೀಡಬೇಕಾದ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹುದ್ದೆ ಮತ್ತು ವಿಳಾಸ | |

ಸ್ಥಳ :

ದಿನಾಂಕ : ಸಹಿ

**6. ಉದಾಹರಣೆ:**

'ಅಂಗಡಿ ಮುಗ್ಗಟ್ಟು ಕಾಯಿದೆ' ಯಂತೆ ಕಾನೂನು ಪ್ರಕಾರ ಅಂಗಡಿ ಮತ್ತು ಸಂಸ್ಥೆಗಳ ನಾಮ ಫಲಕಗಳನ್ನು ಕನ್ನಡದಲ್ಲೂ ಹಾಕಬೇಕು ಎನ್ನುವ ನಿಯಮವಿದೆ. ಆದರೆ ಬೆಂಗಳೂರು ನಗರದಲ್ಲಿ ಇದನ್ನು ಪಾಲಿಸುವವರ ಸಂಖ್ಯೆ ಕಡಿಮೆ ಎಂದು ಗಮನಿಸಿದ ನಗರದ ನಿವಾಸಿಯೊಬ್ಬ ಸಲ್ಲಿಸಿದ ಅರ್ಜಿ

==========================================================================

**ನಮೂನೆ ಎ** (2005 : **ಸೆಕ್ಷನ್** 6(1),7(1))

**1.** ಅರ್ಜಿದಾರನ ಹೆಸರು : ರಮೇಶ್ ಕೆ

**2.** ಅರ್ಜಿದಾರನ ವಿಳಾಸ : ವಿಳಾಸ

**3.** ಯಾವ ವಿವರಗಳು( ದಾಖಲೆ/ವಿಷಯ/ನಮೂನೆ) ಬೇಕಾಗಿವೆ

ಬೆಂಗಳೂರು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಂಗಡಿ ಮತ್ತು ಸಂಸ್ಥೆಗಳ ನಾಮ ಫಲಕ ಕನ್ನಡದಲ್ಲಿ ಇಲ್ಲದೇ ಇರುವ ಬಗ್ಗೆ

1. ನಾಮ ಫಲಕ ಕನ್ನಡದಲ್ಲಿ ಹಾಕಬೇಕಾದ ಬಗ್ಗೆ ಪಾಲಿಕೆ ಯಲ್ಲಿರುವ ದಾಖಲೆ, ಸುತ್ತೋಲೆಗಳು
2. ಇತ್ತೀಚಿನ ವರ್ಷಗಳಲ್ಲಿ ನಿಯಮ ಉಲ್ಲಂಘಿಸಿದವರ ಸಂಖ್ಯೆ, ಕೈ ಕೊಂಡ ಕ್ರಮ, ವಸೂಲಿ ಮಾಡಿದ ದಂಡದ ವಿವರ
3. ಕ್ರಮ ತೆಗೆದು ಕೊಳ್ಳದಿದ್ದಲ್ಲಿ ಮುಂದೆ ನಿಯಮ ಉಲ್ಲಂಘಿಸದಂತೆ ಕೈ ಕೊಳ್ಳುವ ಕ್ರಮ ಏನು?

**4.** ಮಾಹಿತಿ ನೀಡಬೇಕಾದ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹುದ್ದೆ ಮತ್ತು ವಿಳಾಸ:

ಸಾರ್ವಜನಿಕ ಸಂಪರ್ಕ ಅಧಿಕಾರಿ – ಬೆಂಗಳೂರು ಮಹಾನಗರ ಪಾಲಿಕೆ

ಸ್ಥಳ : ಬೆಂಗಳೂರು

ದಿನಾಂಕ : 9/10/2006 ಸಹಿ

==========================================================================

10 ರೂ ಶುಲ್ಕ ಕಟ್ಟಿ ಮೇಲಿನ ಅರ್ಜಿ ಸಲ್ಲಿಸಿದ ನಂತರ ಮತ್ತು ಅಧಿಕ ವಿವರಗಳಿಗೆ, ಕೇಳಿದಂತೆ ಶುಲ್ಕ ಪಾವತಿಸಿದ ನಂತರ ಪಾಲಿಕೆ ಕೆಳಕಂಡ ವಿವರಗಳನ್ನು ಒದಗಿಸಿತು.

- ಕಾನೂನು ಉಲ್ಲಂಘಿಸಿದವರಿಗೆ ಇಲ್ಲಿಯವರೆಗೆ ಬರೀ ನೋಟೀಸ್ ಜಾರಿ ಮಾಡುತ್ತಿರುವ ಬಗ್ಗೆ ವಿವರಗಳು.
- ಸೂಕ್ತ ಕಾಯಿದೆ ಅಡಿ ಕ್ರಮ ಕೈಗೊಳ್ಳುವ ಭರವಸೆ.

<u>ಒದಗಿಸಿದ ವಿವರಗಳಿಂದ ತಿಳಿದು ಬರುವುದೇನಂದರೆ, ನಗರ ಪಾಲಿಕೆಯ ಕಾನೂನು ಉಲ್ಲಂಘಿಸಿದವರ ಮೇಲೆ ತಾನು ಕ್ರಮ ಕೈಗೊಳ್ಳದೇ ಇರುವುದರಿಂದ ಕಾನೂನು ಉಲ್ಲಂಘಿಸುವವರ ಸಂಖ್ಯೆ ದಿನೇ ದಿನೇ ಜಾಸ್ತಿ ಯಾಗುತ್ತಾ ಇದೆ. ಸಾರ್ವಜನಿಕರು ಪಾಲಿಕೆಯ ಮೇಲೆ ಒತ್ತಡ ಹೇರಲೇ ಬೇಕಾದ ಪರಿಸ್ಥಿತಿ.</u>

==========================================================================